ಕರ್ನಾಟಕ ಸರ್ಕಾರ

ಸಂಖ್ಯೆ:ಕಾಶಿಇ: 209:ಶೈವಿ:ಪ್ರವೇಶ: 2002-03

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು-1, ದಿನಾಂಕ:09-01-2003

## ಸುತ್ತೋಲೆ

ವಿಷಯ:- ಕರ್ನಾಟಕ ರಾಜ್ಯದ ಪದವಿ ಕಾಲೇಜುಗಳಲ್ಲಿ ಪ್ರಥಮ ಪದವಿ ತರಗತಿಗಳ ಪ್ರವೇಶದಲ್ಲಿ ಹೆಚ್ಚಿನ ಪಾರದರ್ಶಕತೆ ತರುವ ಬಗ್ಗೆ.

- - - o - - -

ಪದವಿ ಕಾಲೇಜುಗಳಲ್ಲಿ ಪ್ರಥಮ ವರ್ಷದ ತರಗತಿಗಳಿಗೆ ಪ್ರವೇಶದಲ್ಲಿ ಹೆಚ್ಚಿನ ಪಾರದರ್ಶಕತೆ ತರುವ ಸದುದ್ದೇಶದಿಂದ ಈ ಕಳೆಕಂಡ ಮಾರ್ಗಸೂಚಿಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ಸುಪ್ರೀಮ್ ಕೋರ್ಟಿನ ತೀರ್ಪಿನ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ. ಇದನ್ನು 2003-2004ನೇ ಶೈಕ್ಷಣಿಕ ಸಾಲಿನಿಂದ ಪ್ರಥಮ ವರ್ಷದ ಪದವಿ ತರಗತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವಾಗ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನಿತ ಅಲ್ಪಸಂಖ್ಯಾತ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

1. ತಮ್ಮ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಲಭ್ಯವಿರುವ ಒಟ್ಟು ಪ್ರವೇಶಗಳ ಸಂಖ್ಯೆಯನ್ನು ಸೂಚನಾಫಲಕದ ಮೇಲೆ / ವೆಬ್‌ಸೈಟ್‌ನಲ್ಲಿ ದಾಖಲಾತಿ ಪ್ರಕ್ರಿಯೆ ಪ್ರಾರಂಭವಾಗುವ ಮಾದಲು ಪ್ರಕಟಿಸಬೇಕು. ಈ ಪ್ರವೇಶ ಸಂಖ್ಯೆಯನ್ನು ಸಂಯೋಜನೆವಾರು ರೋಸ್ಟರ್ ಪದ್ಧತಿ ಪ್ರಕಾರ ಪ್ರಕಟಿಸಬೇಕು. ಪ್ರತಿ ಸಂಯೋಜನೆಯಲ್ಲಿ ಎಷ್ಟು ವರ್ಗಗಳು (Sections) ಇರುತ್ತವೆ ಎಂಬುದನ್ನು ನಮೂದಿಸಬೇಕು. ಈ ರೀತಿಯಲ್ಲಿ ಪ್ರಕಟಿಸಿರುವ ಸಂಯೋಜನೆಗಳಿಗೆ / ವರ್ಗಗಳಿಗೆ ವಿಶ್ವವಿದ್ಯಾನಿಲಯದಿಂದ ಅನುಮತಿ ಪಡೆದಿರಬೇಕು. ಆಯಾ ವಿಶ್ವವಿದ್ಯಾನಿಲಯ ನಿಗದಿ ಪಡಿಸಿದ ಪ್ರಕಾರ ವಿದ್ಯಾರ್ಥಿಗಳನ್ನು ಮಾತ್ರ ದಾಖಲಾತಿ ಮಾಡಿಕೊಳ್ಳಬೇಕು. ಸೂಚನಾಫಲಕದ ಮೇಲೆ ಪ್ರಕಟಿಸಬಹುದಾದ ಮಾಹಿತಿಗೆ ಒಂದು ಉದಾಹರಣೆ ಕೊಡಲಾಗಿದೆ.

ಉದಾ:- ಖಾಸಗಿ ಅನುದಾನಿತ ಕಾಲೇಜು

| | | | |
|---|---|---|---|
| ಕಾಲೇಜಿನಲ್ಲಿ ಲಭ್ಯವಿರುವ ಒಟ್ಟು ಪ್ರವೇಶಗಳು - | | - | 600 |
| ವಿಭಾಗವಾರು/ಸಂಯೋಜನೆವಾರು ಲಭ್ಯವಿರುವ ಪ್ರವೇಶಗಳು - | ವಿಜ್ಞಾನ ವಿಭಾಗ | - | 200 |
| | ವಾಣಿಜ್ಯ ವಿಭಾಗ | - | 100 |
| | ಕಲಾ ವಿಭಾಗ | - | 300 |

Scanned with CamScanner

ವಿಭಾಗವಾರು ಲಭ್ಯವಿರುವ ಪ್ರವೇಶಗಳು

| | ಶೇಕಡ | ಬಿ.ಎಸ್ಸಿ | ಬಿ.ಕಾಂ | ಬಿ.ಎ. |
|---|---|---|---|---|
| ಶಿಕ್ಷಣ ಸಂಸ್ಥೆಗೆ ಬಿಡಲಾದ ಪ್ರವೇಶಗಳ ಸಂಖ್ಯೆ: | 20 | 40 | 20 | 60 |
| ಮೆರಿಟ್ ಆಧಾರದ ಮೇಲೆ ಹಂಚಿಕೆಯಾಗುವ ಒಟ್ಟು ಪ್ರವೇಶಗಳ ಸಂಖ್ಯೆ | 80 | 160 | 80 | 240 |

| | ಮೀಸಲಾತಿ ಪ್ರಮಾಣ | ಲಭ್ಯವಿರುವ ಒಟ್ಟು ಪ್ರವೇಶಗಳ ಸಂಖ್ಯೆ | | |
|---|---|---|---|---|
| | ಶೇಕಡ | ಬಿ.ಎಸ್ಸಿ | ಬಿ.ಕಾಂ | ಬಿ.ಎ. |
| | 100% | 200 | 100 | 300 |
| **ಪ್ರವರ್ಗ:** | | | | |
| ಸಾಮಾನ್ಯ ವರ್ಗ - | 50 | 100 | 50 | 150 |
| ಪರಿಶಿಷ್ಟ ಜಾತಿ - | 15 | 30 | 15 | 45 |
| ಪರಿಶಿಷ್ಟ ಪಂಗಡ - | 03 | 06 | 03 | 09 |
| ವರ್ಗ - 1 - | 04 | 08 | 04 | 12 |
| ವರ್ಗ - 2ಎ - | 15 | 30 | 15 | 45 |
| ವರ್ಗ - 2ಬಿ - | 04 | 08 | 04 | 12 |
| ವರ್ಗ - 3ಎ - | 04 | 08 | 04 | 12 |
| ವರ್ಗ - 3ಬಿ - | 05 | 10 | 05 | 15 |

1. ಕಾಲೇಜಿನಲ್ಲಿ ಭೋಧನೆ ಮಾಡುವ ಸಂಯೋಜನೆಗಳು ಹಾಗೂ ಪ್ರತಿ ಸಂಯೋಜನೆಯಲ್ಲಿರುವ ವಿಷಯಗಳು ವಿಶ್ವವಿದ್ಯಾನಿಲಯ ನಿಗಧಿಪಡಿಸಿರುವ ಪಠ್ಯಕ್ರಮದಲ್ಲಿರುವ ಸಂಯೋಜನೆಗಳ ಗುಂಪಿನಲ್ಲಿರಬೇಕು. ಸರ್ಕಾರದ ಅನುಮತಿ ಇಲ್ಲದೆ ಯಾವುದೇ ಸರ್ಕಾರಿ ಪದವಿ ಕಾಲೇಜಿನಲ್ಲಿ ಹೊಸದಾಗಿ ವಿಷಯವನ್ನಾಗಲಿ ಅಥವಾ ಸಂಯೋಜನೆಯನ್ನಾಗಲಿ ಪ್ರಾರಂಭಿಸಬಾರದು ಹಾಗೂ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಬಾರದು. ಇಲಾಖೆಯ ಲಿಖಿತ ಪೂರ್ವಾನುಮತಿ ಇಲ್ಲದೇ ಕಾಲೇಜಿನ ಹೆಚ್ಚುವರಿ ಉಪನ್ಯಾಸಕರಿಗೆ ಕಾರ್ಯಭಾರ ಹಂಚಿಕೆ ಮಾಡುವ ದೃಷ್ಟಿಯಿಂದ ಮಾಧ್ಯಮವಾರು (Medium wise) ತರಗತಿಗಳನ್ನು ಪ್ರಾರಂಭಿಸಬಾರದು.
2. ಪ್ರಥಮ ಪದವಿ ತರಗತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಆಯಾ ವಿಶ್ವವಿದ್ಯಾನಿಲಯಗಳ ವೇಳಾಪಟ್ಟಿಯನ್ನು ಅನುಸರಿಸಬೇಕು. ದಾಖಲಾತಿಯ ಪೂರ್ಣ ವೇಳಾಪಟ್ಟಿಯನ್ನು (Calendar of events for admission) ಕಾಲೇಜಿನಲ್ಲಿ ಪ್ರಮುಖವಾದ ಸ್ಥಳದಲ್ಲಿ ಪೋಷಕರ/ವಿದ್ಯಾರ್ಥಿಗಳ ಗಮನಕ್ಕಾಗಿ ಕಡ್ಡಾಯವಾಗಿ ಪ್ರಕಟಿಸಬೇಕು.

Scanned with CamScanner

## GOVERNMENT OF KARNATAKA

No: DCE/209/AS/ADMISSION:2002-03

Office of the Commissioner of
Collegiate Education, Bangalore-01
Date: 0901.2003

## CIRCULAR

Sub: Bringing Transparency in the I Gr. Degree Colleges in the state.

**Private Aided College:**

Total seats available for admission in the College: 600

Section/Combination wise admission available:

| | |
|---|---|
| Science Division | 200 |
| Commerce Division | 100 |
| Arts Division | 300 |

Reservation policy and total seats available:

| | Percentage | B.Sc. | B.Com. | B.A. |
|---|---|---|---|---|
| Management Seats | 20% | 40 | 20 | 60 |
| Total No. of Seats to be admitted on Merit basis: | 80% | 160 | 80 | 240 |

| Category | B.Com. | B.Sc. | B.Com. | B.A. |
|---|---|---|---|---|
| G.M. | 50% | 100 | 50 | 150 |
| SC | 15% | 30 | 15 | 45 |
| ST | 3% | 6 | 3 | 9 |
| Cat-I | 4% | 8 | 4 | 12 |
| IIA | 15% | 30 | 15 | 45 |
| IIB | 4% | 8 | 4 | 12 |
| IIIA | 4% | 8 | 4 | 12 |
| IIIB | 5% | 10 | 5 | 15 |
| | | | | |

Scanned with CamScanner